<u>ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ</u>

**ಸಿಸಿ ನಂ. 444/2024**

**ಚಾಸಾಃ 4/ಫ್ರಾಸಾಃ 5**

**ದಿನಾಂಕಃ 03-06-2026**

**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

| | |
|---|---|
| **ಸಾಕ್ಷಿದಾರರ ಹೆಸರು** | ಬಂಗಾರೆಪ್ಪ ಕಾಂಬಳೆ |
| ತಂದೆ/ಗಂಡನ ಹೆಸರು | ದುಂಡಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಪಿಸಿ-741, ನರಗುಂದ ಪೋಲಿಸ ಠಾಣೆ |
| ವಾಸ | ನರಗುಂದ |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ</u>**

ಸನ್ 2020 ರಿಂದ ಇಲ್ಲಿಯವರೆಗೆ ನರಗುಂದ ಪೋಲಿಸ ಠಾಣೆಯಲ್ಲಿ ಪಿಸಿ-741 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 04-08-2024 ರಂದು ಚಾಸಾ-1 ರವರೊಂದಿಗೆ ಬೈಕ ಮೇಲೆ ನರಗುಂದ ಪಟ್ಟಣದಲ್ಲಿ ಪೆಟ್ರೋಲಿಂಗ ಕೆಲಸ ನಿರ್ವಹಿಸುವಾಗ ಪಟ್ಟಣದ ಮಾರುತಿ ನಗರದ ಕ್ರಾಸ ಹತ್ತಿರ ಸಂಜೆ 7.45 ಗಂಟೆಯ ಸಮಯದಲ್ಲಿ ಒಬ್ಬ ವ್ಯಕ್ತಿಯು ನಮ್ಮನ್ನು ನೋಡಿ ಮರೆ ಮಾಚಿಕೊಳ್ಳಲು ಪ್ರಯತ್ನಿಸಿರುತ್ತಾನೆ . ಸಂಶಯದ ಮೇಲೆ ಕೂಡಲೇ ನಾವು ಆತನನ್ನು ಹಿಡಿದು ವಿಚಾರಣೆ ಮಾಡಿದ್ದು ಸರಿಯಾಗಿ ಉತ್ತರಿಸಿರುವುದಿಲ್ಲ. ನಂತರ ಚಾಸಾ-1 ರವರು ಚಾಸಾ-2 , 3 ರವರನ್ನು ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ಚಾಸಾ-1 ರವರು ಸದರಿ ವ್ಯಕ್ತಿಗಳಿಗೆ ನಾವು ಬಂಧಿಸಿರುವ ವ್ಯಕ್ತಿಯು ಸಂಶಾಯಸ್ಪದವಾಗಿ ವರ್ತಿಸುತ್ತಿದ್ದು ಆ ಕುರಿತು ಪಂಚನಾಮೆ ಸಮಯದಲ್ಲಿ ಪಂಚರಾಗುವಂತೆ ಕೇಳಿಕೊಂಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ಚಾಸಾ-1 ರವರು ಸದರಿ ಪಂಚರ ಸಮಕ್ಷಮ ಬಂಧಿಸಿದ ವ್ಯಕ್ತಿಯನ್ನು ಹೆಚ್ಚಿನ ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಸುರೇಶ ಅಡಿವೆಪ್ಪ ಮರಾಠೆ, ಸಾಃ ಅಧ್ಯಾಪಕ ನಗರ, ನರಗುಂದ ಎಂದು ತಿಳಿಸಿರುತ್ತಾನೆ. ಆದರೆ ತನ್ನ ವಿಳಾಸದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿರುವುದಿಲ್ಲ. ಸದರಿ ವ್ಯಕ್ತಿಯನ್ನು ನೋಡಿದಾಗ ಆತನು ಕಳ್ಳತನ ಮಾಡುವ ಉದ್ದೇಶ ಹೊಂದಿರುವ ಬಗ್ಗೆ ನಮಗೆ ಕಂಡು ಬಂದಿರುತ್ತದೆ. ಕಾರಣ ಚಾಸಾ-1 ರವರು ಸದರಿ ವ್ಯಕ್ತಿಯನ್ನು ಕರೆದುಕೊಂಡು ಠಾಣೆಗೆ ಹೋಗಿದ್ದು, ಪ್ರಕರಣದ ಕುರಿತು ದೂರು ಸಲ್ಲಿಸಿರುತ್ತಾರೆ. ಪ್ರಕರಣದ ಕುರಿತು ನಾನು ಚಾಸಾ-5 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ದಿನ ಬಂಧಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನಾಗಿದ್ದಾನೆ. ದಾಳಿಯ ಎಲ್ಲ ಪ್ರಕ್ರಿಯೆಗಳನ್ನು ನಾನು ನನ್ನ ಮೊಬೈಲನಲ್ಲಿ ಚಿತ್ರೀಕರಣ ಮಾಡಿಕೊಂಡಿದ್ದು, ನಂತರ ಠಾಣೆಯ ಕಂಪ್ಯೂಟರ ಮೂಲಕ ಸದರಿ ಚಿತ್ರೀಕರಣವನ್ನು

ಡಿವಿಡಿಗೆ ವರ್ಗಾಯಿಸಿ ಸದರಿ ಡಿವಿಡಿಯನ್ನು ನನ್ನ ಪ್ರಮಾಣ ಪತ್ರದೊಂದಿಗೆ ಚಾಸಾ 5 ರವರಿಗೆ ನೀಡಿರುತ್ತೇನೆ.ಸದರಿ ಡಿವಿಡಿಯನ್ನು ಈಗಾಗಲೇ ನಿಪಿ–4 ಎಂದು, ಪ್ರಮಾಣ ಪತ್ರವನ್ನು ನಿಪಿ–7 ಎಂದು ಗುರುತಿಸಲಾಗಿದ್ದು. ಸಾಕ್ಷಿಯ ಸಹಿಯನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಫ ವಾಯ ಡಿ ಆರೋಪಿ ಪರ ವಕೀಲರಿಂದಃ**

ಸದರಿ ದಿನ ಪೆಟ್ರೋಲಿಂಗ ಕರ್ತವ್ಯದ ಅಡಿಯಲ್ಲಿ ಗಾಂಧಿ ಸರ್ಕಲನಿಂದ ಸರ್ವಜ್ಞ ಕ್ರಾಸ ಮಾರ್ಗವಾಗಿ ಮಾರುತಿ ನಗರಕ್ಕೆ ಹೋಗಿರುತ್ತೇವೆ. ನಮ್ಮ ಠಾಣೆಯಿಂದ ಮಾರುತಿ ನಗರ ಅಂದಾಜು 50 ಅಡಿ ಅಂತರದಲ್ಲಿದೆ ಎಂದರೆ ಸರಿಯಲ್ಲ, 50 ಮೀ. ಅಂತರದಲ್ಲಿದೆ. ಆರೋಪಿತನು ಓಡಿ ಹೋಗುತ್ತಿದ್ದ ಸಂದಿಯ ಹೆಸರು ನನಗೆ ಗೊತ್ತಿಲ್ಲ. ಆರೋಪಿತನಿಗೆ ಕಾಲುಗಳಲ್ಲಿ ಆನೆ ಬೆಳೆದಿರುವುದರಿಂದ ಆತನಿಗೆ ಓಡಿ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪಂಚರ ವಿಳಾಸ ನನಗೆ ಗೊತ್ತಿಲ್ಲ. ಹುಬ್ಬಳ್ಳಿ–ವಿಜಯಪೂರ ಹೆದ್ದಾರಿಗೆ ಹೊಂದಿಕೊಂಡು ಮಾರುತಿ ನಗರ ಇದೆ ಎಂದರೆ ಸರಿ. ಪಂಚರನ್ನು ಚಾಸಾ–1 ರವರು ಕರೆದುಕೊಂಡು ಬಂದಿರುತ್ತಾರೆ. ಹೆದ್ದಾರಿ ಪಕ್ಕದಲ್ಲಿ ಇರುವುದರಿಂದ ಸದರಿ ಕ್ರಾಸನಲ್ಲಿ ವಿವಿಧ ರೀತಿಯ ಅಂಗಡಿಗಳು ಇವೆ ಎಂದರೆ ಸರಿ. ಸದರಿ ಪ್ರದೇಶವು ಜನನಿಬಿಡ ಪ್ರದೇಶ ಎಂದರೆ ಸರಿ. ಸದರಿ ಪ್ರದೇಶದಲ್ಲಿ ದಿನದ 24 ಗಂಟೆ ಜನಸಂಚಾರ ಇರುತ್ತದೆ ಎಂದರೆ ಸರಿ. ನಾವು ಪೇಟ್ರೋಲಿಂಗ ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಸದರಿ ಪ್ರದೇಶದಲ್ಲಿ ಬೇರೆ ಜನ ಇರಲಿಲ್ಲ. ಮೇಲಾಧಿಕಾರಿಗಳಿಂದ ಪ್ರತಿ ತಿಂಗಳು ನಿಗದಿತ ಸಂಖ್ಯೆ ಪ್ರಕರಣಗಳನ್ನು ದಾಖಲಿಸಬೇಕೆಂಬ ಆದೇಶ ಇದೆ ಎಂದರೆ ಸರಿಯಲ್ಲ. ಕಾರಣ ಕಛೇರಿಯ ಅಂಕಿ ಅಂಶಗಳಿಗಾಗಿ ಚಾಸಾ–1 ರವರು ದಾಖಲಿಸಿರುವ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ